# ಕಲ್ಪನೆ



ಕಾವ್ಯದ ಮಾಂತ್ರಿಕಮಾರ್ಗ: ದಂಗುಬಡಿಸುವ ಯಕ್ಷಲೋಕದ ಮಾರ್ಗದಂತೆ ಕಾಣಿಸುವ ಈ 'ಕಲಾಕೃತಿ' ನಿಜ ಅರ್ಥದಲ್ಲಿಯೂ ಮಾಂತ್ರಿಕಲೋಕಕ್ಕೆ ಸಂಬಂಧಿಸಿದ್ದೇ. ನ್ಯೂಯಾರ್ಕ್‌ನ 'ಹಾಲ್ ಡೆಸ್ ಲುಮಿಯರ್ಸ್'ನಲ್ಲಿ ಪ್ರದರ್ಶನಗೊಂಡಿರುವ ಈ ಯಕ್ಷಪ್ರದರ್ಶನ, ಡಿಜಿಟಲ್ ಕಲೆಯ ಅಸಾಧಾರಣ ಅನುಭವಗಳನ್ನು ಸಹೃದಯರಿಗೆ ಉಣಬಡಿಸುವ ಉದ್ದೇಶ ಹೊಂದಿದೆ. ವಿಶ್ವಪ್ರಸಿದ್ಧ ಚಿತ್ರಕಾರ ಗುಸ್ತಾವ್ ಕ್ಲಿಮ್ಟ್ ಸೇರಿದಂತೆ ಹಲವು ಪ್ರಸಿದ್ಧ ಕಲಾವಿದರ ಸಾಂಪ್ರದಾಯಿಕ ಕಲಾಕೃತಿಗಳು ಈ ಪ್ರದರ್ಶನದಲ್ಲಿ ಹೊಸ ಪ್ರಭಾವಳಿ ಪಡೆದುಕೊಂಡಿವೆ. ಈ ಕಿನ್ನರಲೋಕ ಹಾಗೂ ಕಿನ್ನರಿಯಂಥ ಚೆಲುವೆ ಯಾರಲ್ಲಾದರೂ ಕಾವ್ಯದ ಒರತೆಯನ್ನು ಉದ್ದೀಪಿಸುವಷ್ಟು ಪರಿಣಾಮಕಾರಿ. ಕಾವ್ಯ–ಕಲ್ಪನಾ ಲೋಕದಲ್ಲಿ ನೀವೂ ವಿಹರಿಸಿ; ಕಾವ್ಯಲಹರಿಯನ್ನು ನಮಗೆ ಬರೆದು ಕಳಿಸಿ. ಚಿತ್ರ: ಎಎಫ್‌ಪಿ

ನಿಮ್ಮ ಕವಿತೆ ನವೆಂಬರ್ 15ರ ಒಳಗೆ ನಮಗೆ ತಲುಪಬೇಕು

---

ವಿಳಾಸ: ಕಲ್ಪನೆ ವಿಭಾಗ, 'ಮಯೂರ'
ನಂ 75, ಮಹಾತ್ಮ ಗಾಂಧಿ ರಸ್ತೆ,
ಬೆಂಗಳೂರು–560 001
ಇ–ಮೇಲ್: editormy@mayura.co.in